8	Ms. Ramya	Teacher	NCLP/Bridge School	
9	Ms. Anitha	Teacher	NCLP/Bridge School	
10	Mrs. Shobha	Teacher	NCLP/Bridge School	
11	Mrs. Ammannamma	Kitchen Staff/Cook	NCLP/Bridge School	
12	Ms. Pramila. R	Operations Manager	Niranthara	

X. Donations From Donors

Name of Donors	Place	Designation	Provided service in kind	Year	Kinds cost calculation
IT for Change	Mysuru	Managing Trustee	2 computer systems (Children learning computers) Seconds.	2017-18	15,000/-
Narayan Lal	HDKote	Rotary president, Provision store &Airtel dealer	Books, pencil, mender, rubber & 2000 Rs. Cheque	2017-18	4,000/-
Madaiah&Kalamma	Basavarajanakattehaadi	Tribals	Vegitables	2017-18	4,00/-
Somesha	Kallala	Tribals Activist	6 pumpkin, 100 Rupees	2017-18	2,80/-
Auto seena	Kote	Auto Driver	10 kg Raagi powder	2017-18	250/-
Shivashankar	Kote	School teacher	School uniform 6 set	2017-18	1800/-
Dhakshayini	Kote	School teacher	2 kg banana, buicate pack 15	2017-18	155/-
Shivu & Kavya	Kote	High school teacher	Celebrated baby birthday at campus provided to children Sweet, scale, books, pens, belt	2017-18	6,50/-
Mission Inde	France		Bags, scale, cotton bag, colour pencil, T shirts, mender, rubber, pencil, & 5800/- Cash given for sports meterials.	2017-18	12,000/-
Thimma Nayaka	HDKote	NF staff- childline team member	2 kg banana, buicate pack 15 &Vegitables, Grains	2017-18	500/-

XI. Nisarga Appreciations

Mr. Amshi Prasanna District Chief Editor of "Kannada Prabha" Wrote a book, name of Kadina Jeevana in that major writing of " Apoushtikathege Spirulina Divya Oushadi" & " Adivasi Makkalige Nisarga Samsthe Prayoga Yashasvi".







NCLP- In the academic year of 2017-18 Children participated in Anti Childlabor Recognised by media Thaluk legal aid cell thaluk administration for participating Prathibha Karanji National Festival participating for tribal cultural activity & got prize.

First time in Karnataka Dhwani Foundation selected for Niranthara program for organisation sustainability.

12/10/2017 Honered to Mr. Nanjundaiah "Mathru Bhoomi Seva Prashasthi" by Vande Matharam Seva Trust. (Nimagondu Salam telecasted by Tv9 Channel for his exelence work in Tribal development)

First time Nisarga Foundation supported Tribal children participated at Vikasa Soudha regarding state level workshop on Child Rights, organised by Child Rights commission, Karnataka. During this time children met Forest minister to demanded "Bhoomi Bhagya" (Land Right) to give their parents.

XII. Conclusion

Nisarga Foundation has stepped ahead with the above mentioned programs during the reporting period in terms of achieving progress of children from the deprived status. Various agencies like Mission Inde of France, Childline India Foundation (Ministry of Women and Child Development), and government departments like Child Labour Project Society, Dept. of Labour, Education, Women and Child Development & Dhwani Foundation have immensely helped the organisation to roll out the programs.

The Board of Directors of Nisarga Foundation is thankful to all the agencies for their support and guidance in time. The continuous support of media in the taluk and district is very encouraging and it was sometimes instrumental to bring out some issues related to tribals. Nisarga is actively in touch with various network organisations as earlier. If the funds released on time to the centre by the Dist. Child Labour Project Society, it would really help in achieving better progress of deprived children.

Nanjundaiah
Director
Nisarga Foundation
H.D.Kote

XIII. Press clippings

ಮಕ್ಕಳ ಸಹಾಯವಾಣಿ: ಮೈತ್ರಿ ಸಪ್ತಾಹ ಉದ್ಘಾಟನೆ

ನಿಸರ್ಗ ಫೌಂಡೇಷನ್, ಒಡಿಪಿ ಮತ್ತು ಆರ್.ಎಲ್.ಜೆ.ಪಿ ಸಂಸ್ಥೆಗಳಿಂದ ಮಕ್ಕಳ ಸಹಾಯವಾಣಿ - 1098 ಮೈತ್ರಿ ಸಪ್ತಾಹವನ್ನು ತಹಸೀಲ್ದಾರ್ ಸಂಯುಕ್ತಾ ಉದ್ಘಾಟಿಸಿದರು.

• ಕ್ಷೇತ್ರಪ್ರತಿನಿಧಿ ವಾರ್ತೆ ಎಚ್.ಡಿ. ಕೋಟೆ

ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ನಿಸರ್ಗ ಫೌಂಡೇಷನ್, ಒಡಿಪಿ ಮತ್ತು ಆರ್.ಎಲ್.ಜೆ.ಪಿ ಸಂಸ್ಥೆಗಳಿಂದ ಮಕ್ಕಳ ಸಹಾಯವಾಣಿ - 1098 ಮೈತ್ರಿ ಸಪ್ತಾಹವನ್ನು ತಹಸೀಲ್ದಾರ್ ಸಂಯುಕ್ತಾ ಉದ್ಘಾಟಿಸಿದ ನಂತರ ಮಕ್ಕಳ ಸಹಾಯವಾಣಿಯ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ನುಂದರ್ ಮಾತನಾಡಿ, ಮಕ್ಕಳು ತಪ್ಪದೆ ಶಾಲೆಗೆ ಬರಬೇಕು ಮತ್ತು ಪೋಷಕರು ಬಾಲ್ಯ ವಿವಾಹ ಕಂಡುಬಂದಲ್ಲಿ ತಕ್ಷಣ 1098 ಕ್ಕೆ ಕರೆಮಾಡಿ ರಕ್ಷಣೆ ಪಡೆಯಲು ಕೋರಬೇಕು ಎಂದು ತಿಳಿಸಿದರು. ಜಿಲ್ಲಾ ಸಂಯೋಜಕ ಧನರಾಜ್ ಮಾತನಾಡಿದರು. ಡಾ. ಚೇತನ್ ಮತ್ತು ತಂಡ ಬಾಲ್ಯಾವಸ್ಥೆ, ಯೋಜನಾ ವ್ಯೆದ್ಯರಿಂದ 350 ಕ್ಕೂ ಹೆಚ್ಚು ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಲಾಗಿದ್ದು, ಇದರಲ್ಲಿ ಸುಮಾರು 100 ಮಕ್ಕಳಲ್ಲಿ ಹೆಚ್ಚು ಅಥವಾ ಕಡಿಮೆ ಮಕ್ಕಳಾಗಿ ಇದ್ದಾರೆ. ವೈದ್ಯಕೀಯ ತಪಾಸಣೆ ನಡೆಸಿ ಔಷಧಿ ಮತ್ತು ಮಾತ್ರೆಗಳನ್ನು ವಿತರಿಸಲಾಯಿತು. ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಮಕ್ಕಳಿಗೆ ಸಂಗೀತ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಆನಂದ್, ಉಮೇಶ್, ಶಿಕ್ಷಣ ಇಲಾಖೆಯ ಅಧಿಕಾರಿ ಭೀಮಪ್ಪ, ಉಪ ಪ್ರಾಂಶುಪಾಲ ರಾಮು, ತಾಲೂಕಿನ ಸಂಯೋಜಕ ಪ್ರಭು, ಗುರುದೇವಾರಾಧ್ಯ, ಚಿಕ್ಕತಿಮ್ಮನಾಯಕ ಮಾತನಾಡಿದರು.

ಕೇರಳದ ಅಪ್ರಾಪ್ತ ಮಕ್ಕಳ ರಕ್ಷಣೆ

ಆ.೨೫, ೨೦೧೭ ಅವಧಿವಾಣಿ

ಮಕ್ಕಳಿರುವ ಸ್ಥಳ ತೋರಿಸಿದ ಮೊಬೈಲ್ ನೆಟ್‌ವರ್ಕ್

ಮಕ್ಕಳ ಸಹಾಯವಾಣಿ ಯಶಸ್ವಿ ಕಾರ್ಯಾಚರಣೆ

ಎಚ್.ಡಿ.ಕೋಟೆ,ಆ.೨೬– ಮನೆಯಿಂದ ನಾಪತ್ತೆಯಾಗಿದ್ದ ಕೇರಳ ಮೂಲದ ಅಪ್ರಾಪ್ತ ಹೆಣ್ಣು ಮಕ್ಕಳನ್ನು ಆಧುನಿಕ ತಂತ್ರಜ್ಞಾನ ಬಳಸಿ ಎಚ್.ಡಿ.ಕೋಟೆಯ ಮಕ್ಕಳ ಸಹಾಯವಾಣಿ ತಂಡವು ರಕ್ಷಿಸಿದ ಘಟನೆ ನಡೆದಿದೆ.

ಕೇರಳ ರಾಜ್ಯದ ಇಡುಕಿ ಜಿಲ್ಲೆಯ ಕುಮುಲಿ ಗ್ರಾಮದ ಇಬ್ಬರು ಅಪ್ರಾಪ್ತ ಹೆಣ್ಣು ಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು ಆ.೧೭ರಂದು ಕಾಣೆಯಾಗಿರುವುದರ ಬಗ್ಗೆ ಕೇರಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಈ ಬಗ್ಗೆ ತನಿಖೆಗೆ ಮುಂದಾದ ಪೊಲೀಸರು, ಕಾಣೆಯಾಗಿರುವ ಈ ಮಕ್ಕಳು ಬಳಸುತ್ತಿದ್ದ ಮೊಬೈಲ್‌ನ ಜಾಡನ್ನು ಆಧುನಿಕ ತಂತ್ರಜ್ಞಾನದ ಮೂಲಕ ಪರಿಶೀಲಿಸಿದಾಗ ಅದು ಕರ್ನಾಟಕದ ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ವ್ಯಾಪ್ತಿಯಲ್ಲಿ ಇರುವುದು ತಿಳಿದು ಬಂದಿದೆ.

ಕೇರಳ ಪೊಲೀಸರು ಈ ವಿಷಯವನ್ನು ಕರ್ನಾಟಕದ ಮಕ್ಕಳ ಸಹಾಯವಾಣಿ ಕೇಂದ್ರಕ್ಕೆ ತಿಳಿಸಿದ್ದಾರೆ. ಕರ್ನಾಟಕ ಮಕ್ಕಳ ಸಹಾಯವಾಣಿ ಕೇಂದ್ರದವರು ಎಚ್.ಡಿ.ಕೋಟೆಯ ಮಕ್ಕಳ ಸಹಾಯವಾಣಿ ಕೇಂದ್ರಕ್ಕೆ ಈ ಕುರಿತು ಮಾಹಿತಿ ನೀಡಿದ್ದಾರೆ.

ಎಚ್.ಡಿ.ಕೋಟೆ ತಾಲ್ಲೂಕು ಮಕ್ಕಳ ಸಹಾಯವಾಣಿ ಕೇಂದ್ರದವರು ಕಾರ್ಯೋನ್ಮುಖರಾಗಿ ಮೊಬೈಲ್ ಕರೆಗಳ ತನಿಖೆ ನಡೆಸಿದಾಗ ಮೊಬೈಲ್ ಸಂಪರ್ಕ ಈ ಮಕ್ಕಳು ಯಾವ ಕಾರಣಕ್ಕಾಗಿ ಕೇರಳದ ತಮ್ಮ ಮನೆ ತೊರೆದರು? ಯಾವ ಕಾರಣಕ್ಕಾಗಿ ಎಚ್.ಡಿ.ಕೋಟೆಗೆ ಬಂದರು? ಎಂಬ ಅಂಶ ಗಳು ಪೊಲೀಸರ ಮುಂದಿನ ತನಿಖೆಯಿಂದ ತಿಳಿದುಬರಬೇಕಾಗಿದೆ.

ಎಚ್.ಡಿ.ಕೋಟೆಯ ಎರಡನೇ ಮುಖ್ಯರಸ್ತೆಯಲ್ಲಿ ಬಳಕೆಯಾಗಿರುವುದು ತಿಳಿದು ಬಂದಿದೆ.

ಮಕ್ಕಳ ಸಹಾಯವಾಣಿ ಸಂಯೋಜಕರಾದ ಪ್ರಭು, ಗುರುದೇವಾರಾಧ್ಯ, ಚಿಕ್ಕತಿಮ್ಮನಾಯ್ಕ ಆ.೨೨ರ ಮಧ್ಯಾಹ್ನ ೩ ಗಂಟೆಯಿಂದ ಮಕ್ಕಳ ಪತ್ತೆಗೆ ಮುಂದಾಗಿದ್ದಾರೆ. ಅದೇ ದಿನ ಸಂಜೆ ೭.೩೦ಕ್ಕೆ ಆ ಜನ ಹುಡುಗ–ಹುಡುಗಿಯರು ಒಂದು ಬಟ್ಟೆ ಅಂಗಡಿಯಲ್ಲಿ ಬಟ್ಟೆ ಖರೀದಿ ಮಾಡುತ್ತಿರುವುದು ಕಂಡು ಬಂದಿದೆ. ತಕ್ಷಣ ಅವರನ್ನು ರಕ್ಷಣೆ ಮಾಡಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಲಾಯಿತು. ಕೇರಳ ಪೊಲೀಸರಿಗೆ ಮಕ್ಕಳು ಸಿಕ್ಕಿರುವ ಬಗ್ಗೆ ತಿಳಿಸಿದಾಗ ರಾತ್ರಿ ೯.೩೦ಕ್ಕೆ ಎಚ್.ಡಿ.ಕೋಟೆ ಪೊಲೀಸ್ ಠಾಣೆಗೆ ಆಗಮಿಸಿ ಮಕ್ಕಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ.

ಈ ಮಕ್ಕಳು ೫ ದಿನಗಳ ಕಾಲ ತಂಗಿದ್ದ ಕೋಟೆ ಪಟ್ಟಣ ಶಾಂತಿಯುರದಲ್ಲಿರುವ ಬಾಡಿಗೆ ಮನೆಗೆ ಕೇರಳ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ನಂತರ ಹೆಣ್ಣು ಮಕ್ಕಳನ್ನು ಪೋಷಕರ ಜೊತೆ ಕೇರಳದ ಕುಮುಲಿ ಠಾಣೆಗೆ ಸುರಕ್ಷಿತವಾಗಿ ಕಳುಹಿಸಿದ್ದಾರೆ.

'ಬಾಲ್ಯ ವಿವಾಹಕ್ಕೆ ಮುಂದಾದರೆ ಕಠಿಣ ಶಿಕ್ಷೆ ಕಾದಿದೆ'

ಎಚ್.ಡಿ.ಕೋಟೆ ತಾಲ್ಲೂಕು ಮಕ್ಕಳ ಸಹಾಯವಾಣಿ ೧೦೯೮ ಸಂಯೋಜಕರಾದ ಪ್ರಭು ಎಚ್ಚರಿಕೆ

ಎಚ್.ಡಿ.ಕೋಟೆ,ಜು.೩೦– ಬಾಲ್ಯವಿವಾಹ ಮಾಡಿದರೆ ೨ ವರ್ಷ ಜೈಲು, ೧ ಲಕ್ಷ ರೂ. ದಂಡ ವಿಧಿಸುವ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ತಾಲ್ಲೂಕು ಮಕ್ಕಳ ಸಹಾಯ ವಾಣಿ ೧೦೯೮ ಸಂಯೋಜಕರಾದ ಪ್ರಭು ಎಚ್ಚರಿಕೆ ನೀಡಿದರು.

ತಾಲ್ಲೂಕಿನ ಪಡುಕೋಟೆ ಕಾವಲ್ ಗಾಂಧಿ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ನಿಸರ್ಗ ಫೌಂಡೇಶನ್ ಮಕ್ಕಳ ಸಹಾಯವಾಣಿ ೧೦೯೮ ವತಿಯಿಂದ ಹಮ್ಮಿಕೊಂಡಿದ್ದ ಬಾಲ್ಯವಿವಾಹ ಕುರಿತು ಅರಿವು ಮೂಡಿಸುವ ಕಾರ್ಯಾಕ್ರಮದಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ೭ ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದೇನೆ ಬಾಲ್ಯವಿವಾಹಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ದೂರುಗಳು ಬರುತ್ತಿವೆ. ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಿಗೆ ತಿಳಿವಳಿಕೆ ನೀಡುತ್ತಿದ್ದೇವೆ. ಆದರೂ ಬಾಲ್ಯ ವಿವಾಹಗಳು ನಿಂತಿಲ್ಲ. ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ಬಾಲ್ಯವಿವಾಹದ ಬಗ್ಗೆ ಜಾಗೃತಿ ಹಾಗೂ ಬಾಲ್ಯ ವಿವಾಹ ನಿಲ್ಲಿಸುವಲ್ಲಿ ನಮ್ಮ ಜೊತೆ ಕೈ ಜೋಡಿಸಬೇಕೆಂದು ಅವರು ಮನವಿ ಮಾಡಿಕೊಂಡರು.

ಜಿಲ್ಲಾ ಸಂಯೋಜಕರಾದ ಧನರಾಜ್ ಮಾತನಾಡಿ, ಮಕ್ಕಳಿಗೆ ಬದುಕುವ ಹಕ್ಕು, ರಕ್ಷಣೆ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವ ಹಕ್ಕುಗಳಿವೆ. ಈ ಹಕ್ಕುಗಳಿಗೆ ಸಂಬಂಧಪಟ್ಟಂತೆ ಯಾರೇ ಆಗಲಿ ಉಲ್ಲಂಘನೆ ಮಾಡಿ ಮಕ್ಕಳನ್ನು ಅವಕಾಶ ವಂಚಿತರನ್ನಾಗಿ ಮಾಡಿದಲ್ಲಿ ೧೦೯೮ ಕರೆ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಗ್ರಾಪಂ ಪಿಡಿಒ ವಿಷಕಂಠಾಚಾರಿ ಮಾತನಾಡಿದರು. ಗ್ರಾಪಂ ಅಧ್ಯಕ್ಷೆ ಮಹಾಲಿಂಗಮ್ಮ, ಉಪಾಧ್ಯಕ್ಷೆ ವೆನಿಲ್ಲಾ, ಕಾರ್ಯದರ್ಶಿ ಶಿವಯ್ಯ, ಅಂಗನವಾಡಿ ಮೇಲ್ವಿಚಾರಕಿ ರುಕ್ಮಿಣಿ, ಮುಖ್ಯೋಪಾಧ್ಯಾಯ ಸೋಮಶೇಖರಪ್ಪ, ತಮ್ಮೇಗೌಡ ಮತ್ತು ಸಹಶಿಕ್ಷಕರು, ಮಕ್ಕಳು, ಪೋಷಕರು ಹಾಗೂ ಮಕ್ಕಳ ಸಹಾಯ ವಾಣಿಯ ಪದ್ಮಾವತಿ, ಮಾರ್ಸಲೀನ್ ಚಿಕ್ಕ ತಿಮ್ಮನಾಯ್ಕ, ಗುರುದೇವಾರಾಧ್ಯ ಮೊದಲಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬಾಲ್ಯವಿವಾಹ ತಡೆಗೆ ಜನಜಾಗೃತಿ ಅಗತ್ಯ

ಎಚ್.ಡಿ.ಕೋಟೆ: ಬಾಲ್ಯವಿವಾಹ ಸಂಬಂಧ ಸಾಕಷ್ಟು ದೂರುಗಳು ಬರುತ್ತಿವೆ. ಜಾಗೃತಿ ಕಾರ್ಯಕ್ರಮದ ಮೂಲಕ ಜನರಲ್ಲಿ ತಿಳಿವಳಿಕೆ ಮೂಡಿ ಸುತ್ತಿದ್ದರೂ ಬಾಲ್ಯವಿವಾಹ ನಿಂತಿಲ್ಲ ಎಂದು ತಾಲೂಕು ಮಕ್ಕಳ ಸಹಾಯವಾಣಿ 1098 ಸಂಯೋಜಕ ಪ್ರಭು ವಿಷಾದ ವ್ಯಕ್ತಪಡಿಸಿದರು.

ತಾಲೂಕಿನ ಪಡುಕೋಟೆ ಕಾವಲ್ ಗಾಂಧಿನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ನಿಸರ್ಗ ಫೌಂಡೇಷನ್, ಮಕ್ಕಳ ಸಹಾಯವಾಣಿ 1098 ವತಿಯಿಂದ ಏರ್ಪಡಿಸಿದ್ದ ಬಾಲ್ಯವಿವಾಹ ಕುರಿತ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಾಲ್ಯವಿವಾಹದಲ್ಲಿ ಭಾಗಿಯಾದವರು ಮತ್ತು ಪೋಷಕರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ. 2 ವರ್ಷ ಜೈಲು, ₹ 1 ಲಕ್ಷ ದಂಡ ವಿಧಿಸಬಹುದಾಗಿದೆ ಎಂದರು.

ಜಿಲ್ಲಾ ಸಂಯೋಜಕ ಧನರಾಜ್ ಮಾತನಾಡಿ, ಮಕ್ಕಳು ಬದುಕುವ ಹಕ್ಕು, ರಕ್ಷಣೆ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವ ಹಕ್ಕು ಹೊಂದಿದ್ದಾರೆ. ಯಾರೇ ಆಗಲಿ ಉಲ್ಲಂಘನೆ ಮಾಡಿದರೆ 1098 ಸಂಖ್ಯೆಗೆ ಕರೆ ಮಾಡಿ ತಿಳಿಸಬೇಕು ಎಂದು ಮನವಿ ಮಾಡಿದರು.

ಪಿಡಿಒ ವಿಷಕಂಠಚಾರಿ ಮಾತನಾಡಿ, ಗ್ರಾಮ ಪಂಚಾಯಿತಿಯಿಂದ ಪ್ರತಿ 6 ತಿಂಗಳಿಗೊಮ್ಮೆ ಮಕ್ಕಳ ಗ್ರಾಮಸಭೆ ನಡೆಸಲಾಗುತ್ತದೆ. ಕಳೆದ ಸಭೆಯಲ್ಲಿ ಮಕ್ಕಳು ಅನೇಕ ಸಮಸ್ಯೆ ಬಿಚ್ಚಿಟ್ಟಿದ್ದರು. ಈ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಮಹಾಲಿಂಗಮ್ಮ, ಉಪಾಧ್ಯಕ್ಷ ವೆನಿಲ್ಲಾ, ಕಾರ್ಯದರ್ಶಿ ಶಿವಯ್ಯ, ಅಂಗನವಾಡಿ ಮೇಲ್ವಿಚಾರಕಿ ರುಕ್ಮಿಣಿ, ಮುಖ್ಯಶಿಕ್ಷಕ ಸೋಮಶೇಖರಪ್ಪ, ತಮ್ಮೇಗೌಡ, ಪೋಷಕರು, ಮಕ್ಕಳ ಸಹಾಯವಾಣಿಯ ಪದ್ಮಾವತಿ, ಮಾರ್ಸಲೀನ್ ಚಿಕ್ಕ ತಿಮ್ಮನಾಯ್ಕ, ಗುರುದೇವಾರಾಧ್ಯ ಸೇರಿದಂತೆ 'ಇತರರು' ಇದ್ದರು.

ಮಧ್ಯರಾತ್ರಿ ಬಾಲ್ಯವಿವಾಹ; ಐವರ ವಿರುದ್ಧ ದೂರು

ಮೈಸೂರು: ಅಧಿಕಾರಿಗಳ ಕಣ್ಣುತಪ್ಪಿಸಲು ಮಧ್ಯರಾತ್ರಿಯಲ್ಲಿ ಬಾಲ್ಯವಿವಾಹ ಮಾಡಿದ ಸಂಗತಿ ತಡವಾಗಿ ಬೆಳಕಿಗೆ ಬಂದಿದ್ದು, 17 ವರ್ಷದ ಬಾಲಕಿಯ ಪತಿ ಹಾಗೂ ಪೋಷಕರು ಸೇರಿ ಐವರ ವಿರುದ್ಧ ಮಹಿಳಾ ಪೊಲೀಸರು ತಾಲೂಕಿನ ದಿಬೆಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಚಿಕ್ಕದೇವನಹಳ್ಳಿ ಹುಂಡಿಯ ಬಾಲಕಿಯ ಪತಿ ರಮೇಶ್, ಈತನ ತಂದೆ ಪುಟ್ಟೇಗೌಡ, ತಾಯಿ ಪಾರ್ವತಮ್ಮ, ಬಾಲಕಿಯ ತಂದೆ ಚಿಕ್ಕಣ್ಣೇಗೌಡ ಹಾಗೂ ತಾಯಿ ನಂಜಮ್ಮ ವಿರುದ್ಧ ಬಾಲ್ಯ ವಿವಾಹ ತಡೆ ಕಾಯ್ದೆ ಅಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಚಿಕ್ಕದೇವನಹಳ್ಳಿ ರಮೇಶ್ (25) ತನ್ನ ಅಕ್ರಮ ಪ್ರಕ್ರಿಯೆಯನ್ನು ಗೋಪ್ಯವಾಗಿ ವಿವಾಹವಾದ ಸಂಗತಿ ಗ್ರಾಮದಲ್ಲಿ ಹಬ್ಬಿತ್ತು. ಇದು ಮಕ್ಕಳ ಸಹಾಯವಾಣಿಗೂ ತಲುಪಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಬ್ಬಂದಿ ಈಚೆಗೆ ಗ್ರಾಮಕ್ಕೆ ಧಾವಿಸಿ ಎರಡೂ ಕುಟುಂಬಗಳ ವಿಚಾರಣೆ ನಡೆಸಿದ್ದರು. ಬಾಲಕಿಯನ್ನು ರಕ್ಷಿಸಿ ಬಾಲಮಂದಿರದಲ್ಲಿ ಆಶ್ರಯ ಕಲ್ಪಿಸಿದ್ದರು.

'ಮಕ್ಕಳ ಕಲ್ಯಾಣ ಸಮಿತಿಯ ವಿಚಾರಣೆ ವೇಳೆ ಬಾಲಕಿಯು ಬಾಲ್ಯ ವಿವಾಹ ಸಂಗತಿ ಬಹಿರಂಗಪಡಿಸಿದ್ದಾಳೆ. ಚಿಕ್ಕದೇವನಹಳ್ಳಿ ಸಮೀಪದ ಗ್ರಾಮವೊಂದರಲ್ಲಿ ಮಾರ್ಚ್ 22ರಂದು ಮಧ್ಯರಾತ್ರಿ 12.30ಕ್ಕೆ ಗೋಪ್ಯವಾಗಿ ವಿವಾಹ ನಡೆದಿದೆ. ಇದರ ಫೋಟೊಗಳು ಲಭ್ಯವಾಗಿದ್ದು, ವಿವಾಹಕ್ಕೆ ಸಾಕ್ಷಿಯಾದವರ ವಿರುದ್ಧವೂ ದೂರು ದಾಖಲಿಸಲಾಗುತ್ತದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪೋಷಕರ ಮಡಿಲು ಸೇರಿದ ಬಾಲಕ

ಎಚ್.ಡಿ.ಕೋಟೆ: ಮನೆಯ ಹಾದಿತಪ್ಪಿ ಪಟ್ಟಣದಲ್ಲಿ ಅಲೆದಾಟುತ್ತಿದ್ದ ಬಾಲಕ ಮತ್ತೆ ಪೋಷಕರ ಮಡಿಲು ಸೇರಿದ ಘಟನೆ ಗುರುವಾರ ಪಟ್ಟಣದಲ್ಲಿ ನಡೆಯಿತು.

ತಾಲ್ಲೂಕಿನ ಅಲತ್ತಾಳಕುಂದಿ ಗ್ರಾಮದ ಶಿವಮಲ್ಲು ಮತ್ತು ಗಾಯತ್ರಿ ದಂಪತಿ ಪುತ್ರ ಮನೋಜ್ (11) ಪಟ್ಟಣದಲ್ಲಿ ಅಲೆದಾಡುತ್ತಿದ್ದ. ಹಾದನೂರಿನ ದೊಡ್ಡಸಿದ್ದು ಎಂಬುವವರು ವಿಚಾರಿಸಿದಾಗ ಬಾಲಕನಿಂದ ಸಮರ್ಪಕ ಉತ್ತರ ಸಿಗಲಿಲ್ಲ. ಅನುಮಾನಗೊಂಡು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವಿಷಯ ತಿಳಿಸಿದರು.

ಬಳಿಕ ಮಹಿಳಾ ಮತ್ತು ಮಕ್ಕಳ ಸಾಂತ್ವನ ಕೇಂದ್ರ ಸಹಾಯದೊಂದಿಗೆ ವಶಕ್ಕೆ ಪಡೆದು ವಿಚಾರಿಸಲಾಯಿತು. ಬಾಲಕ ಹೇಳಿದ ಗ್ರಾಮಗಳಲ್ಲಿ ಪೊಲೀಸರು ಮತ್ತು ಅಧಿಕಾರಿಗಳು ಸುತ್ತಾಡಿದರೂ ಪೋಷಕರು ಪತ್ತೆಯಾಗಲಿಲ್ಲ. ಬುಧವಾರ ರಾತ್ರಿ ಮಕ್ಕಳ ಸಹಾಯವಾಣಿಯ ಆಶ್ರಮ ಶಾಲೆಯಲ್ಲಿ ಇರಿಸಿಕೊಂಡಿದ್ದರು.

ಬಾಲಕನ ಜತೆ ಮಕ್ಕಳ ಸಹಾಯವಾಣಿ ಸಂಯೋಜಕ ಪ್ರಭು, ಗುರುದೇವಾರಾಧ್ಯ, ಮಹಿಳಾ ಸಾಂತ್ವನ ಕೇಂದ್ರದ ಜಶೀಲ, ದೊಡ್ಡಸಿದ್ದು, ಸಣ್ಣಕುಮಾರ್ ಪೋಷಕರು ಇದ್ದಾರೆ

ಈ ಮಧ್ಯೆ, ಪೋಷಕರು ಕೂಡ ಮಗನಿಗಾಗಿ ಹುಡುಕಾಟದಲ್ಲಿದ್ದಾಗ, ಪೊಲೀಸರ ವಾಹನದಲ್ಲಿ ಓಡಾಡುತ್ತಿರುವುದಾಗಿ ಸಾರ್ವಜನಿಕರಿಂದ ವಿಷಯ ತಿಳಿಯಿತು. ಬಳಿಕ ಪಟ್ಟಣದ ಪೊಲೀಸ್ ಠಾಣೆಗೆ ತೆರಳಿ ವಿಚಾರಿಸಿದಾಗ ಬಾಲಕ ಸಿಕ್ಕಿರುವ ವಿಷಯ ತಿಳಿದಿದೆ. ನಂತರ ಪೊಲೀಸರು ಪೋಷಕರ ವಿಚಾರಣೆ ಮಾಡಿ ಮುಚ್ಚಳಿಕೆ ಬರೆಸಿಕೊಂಡು ಒಪ್ಪಿಸಿದರು. ಮಕ್ಕಳ ಸಹಾಯವಾಣಿ ಸಂಯೋಜಕ ಪ್ರಭು, ಗುರುದೇವಾರಾಧ್ಯ ಮತ್ತು ಸಿಬ್ಬಂದಿ, ಮಹಿಳಾ ಸಾಂತ್ವನ ಕೇಂದ್ರದ ಜಶೀಲ, ದೊಡ್ಡಸಿದ್ದು, ಸಣ್ಣಕುಮಾರ್, ಪೋಷಕರು ಇದ್ದರು.

ವಿಜಯ ಕರ್ನಾಟಕ
16.09.2017

ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ಸಿಗಲಿ

ಪ್ರಜಾವಾಣಿ 16.10.2017

ಶಿಂಯೋಲನ ದಿನ ಪತ್ರಿಕೆ

ನಿಸರ್ಗ ಫೌಂಡೇಶನ್‌ನ ನಂಜುಂಡಯ್ಯರವರಿಗೆ ಪ್ರಶಸ್ತಿ

ಎಚ್.ಡಿ.ಕೋಟೆ,ಅ.೧೫– ಎಚ್.ಡಿ.ಕೋಟೆ ತಾಲ್ಲೂಕಿನ ಸುಮಾರು ೧೯೦ ಹಾಡಿಗಳಲ್ಲಿ ಪರಿಸರಮೇಯ ಸೇವೆ, ಸಾಕ್ಷರತೆ, ರಂಗಭೂಮಿ, ಪರಿಸರ, ಆದಿವಾಸಿ ಸಂಸ್ಕೃತಿ ರಕ್ಷಣೆ, ಜನಪದ ಜೋರಾಗಿ ಹೀಗೆ ಹಲವು ಕಾರ್ಯಕ್ರಮಗಳನ್ನು ಸದ್ದುಗದ್ದಲವಿಲ್ಲದೆ ಸದ್ದಿಲ್ಲದೆ ಸಂಘಟಿಸಿಕೊಂಡಿದ್ದ ನಿಸರ್ಗ ಫೌಂಡೇಶನ್‌ನ ನಂಜುಂಡಯ್ಯ ಅವರಿಗೆ ಮಾಸ್ತಿಶ್ರೀ ಸಮಿತಿಯು ಪ್ರತಿಷ್ಠಿತ ಮಾಸ್ತಿಶ್ರೀ ಪ್ರಶಸ್ತಿಯನ್ನು ಪ್ರಕಟಿಸಿದೆ.

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಮೊಡ್ಡಹೆಜ್ಜೂರು ಗ್ರಾಮದ ಗೌರಮ್ಮ-ನಂಜಯ್ಯ ದಂಪತಿ ಮಕ್ಕಳಾಗಿ ೧೯೬೦ರಲ್ಲಿ ಜನಿಸಿದ ಇವರು ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವಾಲಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯೋಜನೆಯ ಸದಸ್ಯರಾಗಿ ೨೫ ವರ್ಷಗಳ ಕಾಲ ಸೇವೆ ಸಲ್ಲಿಸಿರುವುದಕ್ಕಾಗಿ ಆದಿವಾಸಿ ಹಿಂದುಳಿದ ವರ್ಗಗಳ ೩೦ ಪ್ರಾಥಮಿಕ ಶಾಲೆಗಳಲ್ಲಿ ಬಾಪತಿ ಶಾಲೆ ನಡೆಸಿ ಸಾವಿರಾರು ಆದಿವಾಸಿಗಳಿಗೆ ಅಕ್ಷರ ಜ್ಞಾನ ನೀಡಿದ್ದಾರೆ. ಮಹಿಳಾ ಸಬಲೀಕರಣ ಇನ್ನೂ ಹಲವು ಸಾಮಾಜಿಕ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಪಾಸಿಗ ಪಾಪಿಲಿಗಳಲ್ಲಿ ಇವರ ಸೇವೆ ಪ್ರಸಾರವಾಗಿದೆ. ೨೦೦೦ರಲ್ಲಿ ನಿಸರ್ಗ ಫೌಂಡೇಶನ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿಸರ್ಗ ಸಂಸ್ಥೆ ಆಡಳಿತ ಮಂಡಳಿ, ಸಿಬ್ಬಂದಿ ಮತ್ತು ಪಾಲಕ್ಕಾರ್ಮಿಕ ಶಾಲಾ ಮಕ್ಕಳು ಸೇರಿ ಪ್ರಶಸ್ತಿ ಪತ್ರವನ್ನು ನಂಜುಂಡಯ್ಯನವರಿಗೆ ಸಮರ್ಪಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI MYSURU
ಭಾನುವಾರ 18 ಜೂನ್ 2017
18 JUNE 2017
15

ಮಜ್ಜನಕುಪ್ಪೆ ಹಾಡಿಯ ಅದಿವಾಸಿ ಅಜ್ಜಯ್ಯನ ಸಾಂಸ್ಕೃತಿಕ ಕಲಾಕೇಂದ್ರದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡ ನೆಡಲಾಯಿತು.

ಬಾಲಕಾರ್ಮಿಕ ಪದ್ಧತಿ ತೊಲಗಿಸಿ

■ ವಿಜಯವಾಣಿ ಸುದ್ದಿಜಾಲ ಎಚ್.ಡಿ. ಕೋಟೆ

ಜನಸಮುದಾಯ ಜಾಗೃತಗೊಂಡು ಅನಿಷ್ಟ ಬಾಲಕಾರ್ಮಿಕ ಪದ್ಧತಿಯನ್ನು ಹೋಗಲಾಡಿಸಲು ಪಣ ತೊಡಬೇಕು ಎಂದು ನಿಸರ್ಗ ಫೌಂಡೇಷನ್‌ನ ಸಂಸ್ಥಾಪಕ ನಂಜುಂಡಯ್ಯ ತಿಳಿಸಿದರು.

ಮಜ್ಜನಕುಪ್ಪೆ ಹಾಡಿಯ ಅದಿವಾಸಿ ಅಜ್ಜಯ್ಯನ ಸಾಂಸ್ಕೃತಿಕ ಕಲಾಕೇಂದ್ರದಲ್ಲಿ ನಿಸರ್ಗ ಫೌಂಡೇಷನ್ ಮತ್ತು ಮಕ್ಕಳ ಸಹಾಯವಾಣಿ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಮತ್ತು ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅದಿವಾಸಿಗಳ ಮಕ್ಕಳು ಹೆಚ್ಚಾಗಿ ಬಾಲ ಕಾರ್ಮಿಕ ಪದ್ಧತಿಗೆ ಒಳಗಾಗುತ್ತಿದ್ದಾರೆ. ಕಾಡಿನಿಂದ ಹೊರಬಂದ ಅದಿವಾಸಿಗಳಿಗೆ ಸರ್ಕಾರದ ಯೋಜನೆಗಳು ನೇರವಾಗಿ ತಲುಪಿದಾಗ ಮಾತ್ರ ಬಾಲಕಾರ್ಮಿಕ ಪದ್ಧತಿಗೆ ತಡೆಯೊಡ್ಡಬಹುದು. 6 ವರ್ಷಗಳಲ್ಲಿ ನಿಸರ್ಗ ಬಾಲಕಾರ್ಮಿಕ ಪುನರ್ವಸತಿ ಶಾಲೆ 300ಕ್ಕೂ ಹೆಚ್ಚು ಶಾಲೆ ಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಯಶಸ್ವಿಯಾಗಿದೆ ಎಂದರು.

ನಿಸರ್ಗ ಸಂಸ್ಥೆಯ ಸಂಯೋಜಕಿ ವಿಲ್‌ಕಾರ್ ಮಾತನಾಡಿದರು. ಇದೇ ವೇಳೆ ಕಲಾವಿದನ ಸುತ್ತಮುತ್ತ ಸಸಿಗಳನ್ನು ನೆಟ್ಟು ಪರಿಸರ ದಿನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ನಿಸರ್ಗ ಸಂಸ್ಥೆಯ ಸಿಬ್ಬಂದಿ ಚಿಕ್ಕತಿಮ್ಮನಾಯಕ, ಗುರುದೇವ ಆರಾಧ್ಯ ಮಹದೇಶ್ವರಿ, ಪದ್ಮಾವತಿ, ಅನಿತಾ ಕೋಭ ಮುಂತಾದವರು ಇದ್ದರು.

ಪ್ರಜಾವಾಣಿ ಜೂ. ೭, ೨೦೧೭

ವಿಶ್ವ ಬಾಲಕಾರ್ಮಿಕರ ಪದ್ಧತಿ ವಿರೋಧಿ ದಿನಾಚರಣೆ

ಕಾರ್ಯಕ್ರಮದ ಸೂರ್ಯಸಿದ್ಧತಾ ಸಭೆಯಲ್ಲಿ ಜಿಲ್ಲಾಧಿಕಾರಿ ಡಿ.ರಂದೀಪ್

ಮೈಸೂರು- ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತ್ ಮೈ.ನಿರಂದು ಇಗ್ನಿಟ್ಟಿಷನ್ ಆಫ್ ಇಂಡಿಯಾ, ಸಭಾಂಗಣದಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯನ್ನು ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಿ.ರಂದೀಪ್ ತಿಳಿಸಿದರು.

ಮಂಗಳವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಾಲ ಕಾರ್ಮಿಕ ಪದ್ಧತಿ ಸಮಾಜಕ್ಕೆ ಮಾರಕವಾಗಿದ್ದು, ಬಾಲಕಾರ್ಮಿಕರನ್ನು ಶೋಷಿಸಿ ಹೆಚ್ಚುವರಿ ದುಡಿಮೆ ಕೈಗೊಳ್ಳುವ ಕಾನೂನು ವಿರುದ್ಧ ಕ್ರಮಗಳ ಬಗ್ಗೆ ಜಾಗೃತಿಯನ್ನು ಮೂಡಿಸಲು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ಕಬ್ಬು ಮತ್ತಿತರೆ ಮಾತ್ರವಲ್ಲ, ಶಾಲೆಗಳು ಮುಚ್ಚಲ್ಪಟ್ಟಿರುವ ವಿಶೇಷ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಆಚರಿಸಲಾಗುವುದು. ಬಾಲಕಾರ್ಮಿಕ ಪದ್ಧತಿ ಆಚರಿಸುವುದರಿಂದ ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಜಾಗೃತಿ ಮೂಡಿಸಲು ಮುಂದಿನ ಪ್ರಮುಖ ಕೈಗೊಳ್ಳುವಂತೆ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಬಾಲಕಾರ್ಮಿಕರು ಇಲ್ಲ ಎಂಬ ಸಂಖ್ಯೆಯಿದ್ದು, ಅಂಥ ಮಕ್ಕಳು ಕಂಡುಬಂದಲ್ಲಿ ಅಂಥ ಮಕ್ಕಳನ್ನು ಶಾಲೆಗೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಿ.ರಂದೀಪ್ ತಿಳಿಸಿದರು.

ಸಂಜುಂಡಿಪುರಂ ಮೈಸೂರಿನಲ್ಲಿ ಶ್ರೀಕಂಠೇಶ್ವರ ಬಾಲಕಾರ್ಮಿಕ ಪಶಾಲೆ, ಶ್ರೀಕಂಠೇಶ್ವರ ಬಾಲಕಾರ್ಮಿಕ ಶಾಲೆ ಸಂಸ್ಥೆ ಹುಣಸೂರಿನಲ್ಲಿ ಡಿಇಡಿ ಬಾಲ ಕಾರ್ಮಿಕ ಪಶಾಲೆ ಹಾಗೂ ಎಚ್.ಡಿ. ಕೋಟೆಯಲ್ಲಿ ನಿಸರ್ಗ ಬಾಲಕಾರ್ಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಇವುಗಳನ್ನು ಪರಿಶೀಲಿಸಿ ನಿಸರ್ಗ ಬಾಲಕಾರ್ಮಿಕ ಶಾಲೆಗಳ ಕೇಂದ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಅನುದಾನ ಬಿಡುಗಡೆ ಮಾಡುವಂತೆ ಕಾರ್ಮಿಕ ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಕಾರ್ಮಿಕ ಇಲಾಖೆ ಸಹಾಯಕ ಆಯುಕ್ತ ಕಮ್ಮಟ್ಟಿ ಕಾರ್ಮಿಕ ಇಲಾಖೆ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ, ಕಾರ್ಮಿಕ ಅಧಿಕಾರಿ ಮಂಜುಳಾದೇವಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಚ್.ಆರ್.ಬಸಪ್ಪ, ಪಾಲಿಕೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಧಾ ಹಲ್ಲೂರವರು ಮಾರ್ಗದರ್ಶನ ಕಲ್ಪಾಣ ಇಲಾಖೆ ಅಧಿಕಾರಿ ಸಿ.ಸೋಮಶೆಖರ ಮುಂತಾದವರು ಭಾಗವಹಿಸಿದ್ದರು.

ಉದಯವಾಣಿ ಡಿ.೩, ೨೦೧೭

ಗ್ರಾಮಾಂತರ / ಮಂಡ್ಯ

ಭೂಮಿ ಭಾಗ್ಯ ಕೋರಿದ ಆದಿವಾಸಿ ಮಕ್ಕಳು

ಅರಣ್ಯ ಸಚಿವರಿಂದ ಬೇಡಿಕೆ ಈಡೇರಿಸುವ ಭರವಸೆ

ಎಚ್.ಡಿ.ಕೋಟೆ,ಡಿ.೨– ಅವರು ಆದಿವಾಸಿಗಳಾಗಿದ್ದರೂ ದಿಟ್ಟ ಮಕ್ಕಳಾಗಿದ್ದರು. ತಮ್ಮ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅರಿವಿತ್ತು. ಸಚಿವರ ಎದುರೇ ಆಳುಕದೇ 'ನಮಗೆ ಭೂಮಿ ಭಾಗ್ಯ' ನೀಡಿ ಎಂದು ಕೋರಿದರು.

ಬೆಂಗಳೂರು ವಿಕಾಸ ಸೌಧದಲ್ಲಿ ನಡೆದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗವು ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯ್ದೆ ೨೦೦೬ರ ಜಾರಿಯಲ್ಲಿಯ ನ್ಯೂನತೆಗಳನ್ನು ಸರಿಪಡಿಸುವಿಕೆಯ ಕುರಿತು, ಅರಣ್ಯ ಅವಲಂಬಿತ ಸಮುದಾಯದ ಮಕ್ಕಳ ಜೊತೆ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಮಕ್ಕಳ ಸಂವಾದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನಿಂದ ನಿಸರ್ಗ ಬಾಲಕಾರ್ಮಿಕ ಶಾಲೆ ಮತ್ತಿಯಿಂದ ೮ ಮಕ್ಕಳು ಮತ್ತು ಸಂಸ್ಥೆಯ ಕಾರ್ಯಕರ್ತರು ಭಾಗವಹಿಸಿದ್ದರು.

ಸಂವಾದದಲ್ಲಿ ಈ ಮಕ್ಕಳು ದಿಟ್ಟವಾಗಿ ಅರಣ್ಯ ಸಚಿವ ರಮಾನಾಥ ರೈಯವರಲ್ಲಿ ತಮ್ಮ ಸಮುದಾಯ ದವರು ಖಾಯಂ ಆಗಿ ನೆಲೆಸಲು ತಮಗೆ ಭೂಮಿ ಭಾಗ್ಯವನ್ನು ನೀಡಿ ಎಂದು ಕೋರಿದರು. ಮಕ್ಕಳ ಈ ಕೋರಿಕೆಗೆ ಸಚಿವರು ಸ್ಪಂದಿಸಿ, ಈ ಪ್ರಮುಖ ಬೇಡಿಕೆಯನ್ನು ಶೀಘ್ರದಲ್ಲಿಯೇ ಈಡೇರಿಸುವ ಭರವಸೆಯನ್ನೂ ನೀಡಿದರು.

ಸಚಿವರ ಮುಂದಿಡಲಾದ ಪ್ರಶ್ನೆಗಳು: ರಾಜ್ಯದಲ್ಲಿ ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳಿಗೆ ಹಾಗೂ ಇತರ ಪಾರಂಪರಿಕ ಅರಣ್ಯವಾಸಿಗಳಿಗೆ ಮಸಾಹತುಶಾಹಿ ಹಾಗೂ ಸ್ವತಂತ್ರ ಭಾರತದ ಅವಧಿಯಲ್ಲಿ ರಾಜ್ಯ ಅರಣ್ಯಗಳ ಸಂಯೋಜನೆಯಲ್ಲಿ ಅವರ ಪಿತ್ರಾರ್ಜಿತ ಜಮೀನುಗಳ ಮತ್ತು ಅವರ ವಾಸಸ್ಥಳದ ಮೇಲಿನ ಅರಣ್ಯ ಹಕ್ಕುಗಳನ್ನು ಸಾಕಷ್ಟು ಮಾನ್ಯ ಮಾಡದೆ ತನ್ನಿಂದ ಆದ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸಲು ಅರಣ್ಯ ಹಕ್ಕಿನ ಕಾಯ್ದೆಯನ್ನು ರೂಪಿಸಿ ೨೯ ಡಿಸೆಂಬರ್ ೨೦೦೬ ರಲ್ಲಿ ಜಾರಿಗೆ ತರಲಾಗಿದೆ.ಈ ಕಾಯ್ದೆಯಡಿಯಲ್ಲಿ ವೈಯಕ್ತಿಕ ಹಕ್ಕು (ಫಾರಂ ಎ) ಹಾಗೂ ಸಾಮೂಹಿಕ ಹಕ್ಕು (ಫಾರಂ ಬಿ) ಹಾಗೂ ಕಿರು ಸಂಪನ್ಮೂಲಗಳ ಹಕ್ಕು (ಫಾರಂ ಸಿ) ಅರ್ಜಿಗಳನ್ನು ಹಲವು ಸಂಘ ಸಂಸ್ಥೆಗಳ ಸಹಾಯ ಪಡೆದು ಸಲ್ಲಿಸಲಾಗಿತ್ತು. ಕೆಲವು ಮಂದಿಗೆ ವೈಯಕ್ತಿಕ ಹಕ್ಕು ನೀಡಿ ಉಳಿದವರ ಅರ್ಜಿಗಳನ್ನು ತಿರಸ್ಕರಿಸಿದ್ದಾರೆ. ಇದಕ್ಕೆ ಏನು ಕಾರಣ?

ನಾವು ಅರಣ್ಯದಲ್ಲಿ ವಾಸಮಾಡುವ ಹಾಡಿಗಳಿಗೆ ಮೂಲ ಸೌಲಭ್ಯಗಳನ್ನು ನೀಡುತ್ತಿಲ್ಲ. ಆದರೆ ಸಾಮೂಹಿಕ ಹಕ್ಕನ್ನು ನೀಡಿದ್ದಾರೆ. ಏಕೆ?

ಕಾಡಂಚಿನಲ್ಲಿ ವಾಸಿಸುತ್ತಿರುವ ನಾವುಗಳು ಅರಣ್ಯ ಭೂಮಿಯನ್ನು ಹಲವಾರು ವರ್ಷಗಳಿಂದ ಸಾಗುವಳಿ ಮಾಡಿ ಕೊಂಡು ಬರುತ್ತಿದ್ದರೂ ಅರಣ್ಯ ಇಲಾಖೆಯವರು ಟ್ರಂಚ್ ತೆಗೆದು ತಂತಿ ಬೇಲಿ ಹಾಕಿ ಅತಿಕ್ರಮಣ ಮಾಡಿ ದ್ದಾರೆ. ಯಾವ ಕಾರಣಕ್ಕೆ ಅರಣ್ಯ ಇಲಾಖೆಯವರು ಈ ರೀತಿ ವರ್ತಿಸಿದ್ದಾರೆ?

ನಾವು ಆನಾದಿ ಕಾಲದಿಂದಲೂ ಕಿರು ಅರಣ್ಯ ಮೂಲ ಸಂಪನ್ಮೂಲಗಳನ್ನು ಸಂಗ್ರಹಿಸುತ್ತಾ ಬಂದಿದ್ದೇವು. ಈ ಕಾನೂನು ಬಂದ ಮೇಲೆ ಅರಣ್ಯ ಇಲಾಖೆಯವರು ಸಂಪನ್ಮೂಲ ಸಂಗ್ರಹಿಸಲು ಬಿಡುತ್ತಿಲ್ಲ ಇದು ಯಾವ ನ್ಯಾಯ?

ಅರಣ್ಯದಲ್ಲಿ ವಾಸಿಸುತ್ತಿರುವ ನಮಗೆ ಶಾಲೆ, ಅಂಗನವಾಡಿ ಕ್ಷುಲು ಅವಕಾಶ ನೀಡುತ್ತಿಲ್ಲ ನಮಗೆ ಶಿಕ್ಷಣ ಬೇಡವೇ?

ಈ ಪ್ರಶ್ನೆಗಳನ್ನು ಸಾವಧಾನವಾಗಿ ಆಲಿಸಿದ ಸಚಿವರು, ಸಮಸ್ಯೆಗಳ ನಿವಾರಣೆಗೆ ಮುಂದಾಗುವುದಾಗಿ ಭರವಸೆ ನೀಡಿದರು.

ಮಕ್ಕಳಿಗೆ ಶ್ಲಾಘನೆ: ಆದಿವಾಸಿಗಳ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಂವಾದದಲ್ಲಿ ಪ್ರಸ್ತಾಪಿಸಿದ ಮಕ್ಕಳ ದಿಟ್ಟತನದ ಬಗ್ಗೆ ಸಚಿವರು ಶ್ಲಾಘಿಸಿದರು.

ಈ ಕಾರ್ಯಕ್ರಮಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ ೧೮೦ಕ್ಕೂ ಹೆಚ್ಚು ಮಕ್ಕಳು ಹಾಗೂ ಪೋಷಕರು, ಸ್ವಯಂ ಸೇವಾಸಂಸ್ಥೆ ಪ್ರತಿನಿಧಿಗಳು, ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಕೃಪಾ ಅಮರ ಆಳ್ವ ವಹಿಸಿದ್ದರು. ನಿಸರ್ಗ ಸಂಸ್ಥೆಯಿಂದ ನಂಜುಂಡಯ್ಯ ಹಾಗೂ ದಿಲ್‌ಶಾದ್ ಮತ್ತು ೮ ಮಕ್ಕಳು ಭಾಗವಹಿಸಿದ್ದರು.

ಬೆಂಗಳೂರು ವಿಕಾಸ ಸೌಧದಲ್ಲಿ ನಡೆದ ಅರಣ್ಯ ಅವಲಂಬಿತ ಸಮುದಾಯದ ಮಕ್ಕಳ ಜೊತೆಗಿನ ರಾಜ್ಯ ಮಟ್ಟದ ಮಕ್ಕಳ ಸಂವಾದದಲ್ಲಿ ಭಾಗವಹಿಸಿದ್ದ ನಿಸರ್ಗ ಬಾಲಕಾರ್ಮಿಕ ಶಾಲೆಯ ಮಕ್ಕಳನ್ನು ಚಿತ್ರದಲ್ಲಿ ಕಾಣಬಹುದು. ಅರಣ್ಯ ಸಚಿವ ರಮಾನಾಥ ರೈ ಅವರೂ ಚಿತ್ರದಲ್ಲಿದ್ದಾರೆ.

ಭೂಮಿ ಹಕ್ಕು ಕಾನೂನಿನ ಪ್ರಕಾರ ಕ್ರಮ

ಭೂಮಿ ಹಕ್ಕಿಗೆ ಸಂಬಂಧಿಸಿದಂತೆ ಕಾನೂನಿನ ಪ್ರಕಾರ ಹಾಡಿ ಅರಣ್ಯ ಹಕ್ಕಿನ ಸಮಿತಿಯ ಮುಖಾಂತರ ಉಪ ವಿಭಾಗ ಮಟ್ಟಕ್ಕೆ ಅರ್ಜಿಗಳನ್ನು ಸಲ್ಲಿಸಬೇಕು. ಉಪ ವಿಭಾಗ ಮಟ್ಟವು ಅದನ್ನು ಪರಿಶೀಲಿಸಿ ಜಿಲ್ಲಾ ಮಟ್ಟದ ಸಮಿತಿಗೆ ಶಿಫಾರಸು ಮಾಡಬೇಕು. ಜಿಲ್ಲಾ ಮಟ್ಟದ ಸಮಿತಿಯು ಹಕ್ಕು ಪತ್ರವನ್ನು ವಿತರಿಸಬೇಕು. ಒಂದು ಪಕ್ಷ ತಿರಸ್ಕೃತಗೊಂಡರೆ ಆ ಅರ್ಜಿಗಳನ್ನು ಅರಣ್ಯ ಹಕ್ಕಿನ ಸಮಿತಿಯು ಮರು ಪರಿಶೀಲನೆ ಮಾಡಿ ಜಿಲ್ಲಾ ಮಟ್ಟಕ್ಕೆ ಶಿಫಾರಸು ಮಾಡಬೇಕು. ನಾನು ಮಂತ್ರಿಯಾದ ಮೇಲೆ ತಿರಸ್ಕೃತಗೊಂಡ ಸಾವಿರಾರು ಅರ್ಜಿಗಳನ್ನು ಮರುಪರಿಶೀಲನೆ ಮಾಡಿಸಿದ್ದೇನೆ.

-ರಮಾನಾಥ ರೈ, ಅರಣ್ಯ ಸಚಿವರು.

ಕನ್ನಡಪ್ರಭ

ಭಾನುವಾರ 9.7.2017

ವಿಶೇಷ ಸಲಹೆ ತಹಸೀಲ್ದಾರ್ ಎನ್. ನಂಜುಂಡಯ್ಯ ಸಲಹೆ | ನಿಸರ್ಗ ಫೌಂಡೇಶನ್ ವಾರ್ಷಿಕೋತ್ಸವ ಕಾರ್ಯಕ್ರಮ

ಸಾಮಾಜಿಕ ಪಿಡುಗು ತೊಲಗಿಸುವ ಕೆಲಸ ಮಾಡಿ

• ಕನ್ನಡಪ್ರಭ ವಾರ್ತೆ ಎಚ್.ಡಿ. ಕೋಟೆ

ಸಾಮಾಜಿಕ ಪಿಡುಗು ತೊಲಗಿಸಲು ನಿಸರ್ಗ ಫೌಂಡೇಶನ್ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ ಎಂದು ತಹಸೀಲ್ದಾರ್ ಎನ್. ನಂಜುಂಡಯ್ಯ ಹೇಳಿದರು.

ಪಟ್ಟಣದಲ್ಲಿ ಇರುವ ನಿಸರ್ಗ ಫೌಂಡೇಶನ್ 20ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ಒಂದು ಸ್ವಯಂ ಸೇವಾ ಸಂಸ್ಥೆ ನಡೆಸುವುದು ಸುಲಭದ ಮಾತಲ್ಲ, ಉತ್ತಮ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳನ್ನು ನಿಷ್ಠೆಯ ಮಾಡಲು ಹಲವರು ಪ್ರಯತ್ನ ಮಾಡುತ್ತಿದ್ದಾರೆ. ನಿಸರ್ಗ ಫೌಂಡೇಶನ್ 20 ವರ್ಷದಿಂದ ತಾಲೂಕಿನಲ್ಲಿ ಗಿರಿಜನ, ಹಿಂದುಳಿದವರ ಪರವಾಗಿ ದುಡಿಯುತ್ತಿದ್ದಾರೆ ಎಂದರು.

ಅಭಿವೃದ್ಧಿಸಾಧ್ಯ: ತಾಲೂಕಿನಲ್ಲಿ ನಿಸರ್ಗ ತಿಕರನ್ನು ಗುರುತಿಸಿ ಮುಖ್ಯವಾಹಿನಿಗೆ ತರುವ ಪ್ರಯತ್ನವನ್ನು ಮಾಡುತ್ತಿರುವುದನ್ನು ಪ್ರತಿಯೊಬ್ಬರು ಶ್ಲಾಘಿಸಬೇಕು. ಗಿರಿಜನರು ಕಾಡಿನ ಒಳಗೆ ತಮ್ಮ ಬದುಕನ್ನು ಸಾಗಿಸುತ್ತಿದ್ದು, ಇಂತಹ ಗಿರಿಜನರ ಭಾವನೆ ಅರಿತು ಅವರಿಗೆ ಮುಖ್ಯವಾಹಿನಿಗೆ ತರಬೇಕಾದರೆ ಕಾಡಿನಿಂದ ಹೊರಗೆ ಬಂದರೆ ಅವರನ್ನು ಅಭಿವೃದ್ಧಿಪಡಿಸಬಹುದು, ಆದರಿಂದ ಗಿರಿಜನರು ಮುಖ್ಯವಾಹಿನಿಗೆ ಬರಬೇಕು. ಅದಕ್ಕೆ ಇಂತಹ ಸಂಘ ಸಂಸ್ಥೆಗಳು ಗಿರಿಜನರ ಮನಸ್ಸನ್ನು ಪರಿವರ್ತನೆಗೊಳಿಸಿ ಅವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಅವರು ತಿಳಿಸಿದರು.

ನಿಸರ್ಗ ಫೌಂಡೇಶನ್ ನಿರ್ದೇಶಕ ನಂಜುಂಡಯ್ಯ ಮಾತನಾಡಿ, ಸಂಸ್ಥೆಯು ಈ ಅವಧಿಯಲ್ಲಿ ಹಲವು ಏಳು ಬೀಳುಗಳನ್ನು ಕಂಡಿದೆ. ಸಂಘ ಈ ಮಟ್ಟಕ್ಕೆ ತಲುಪಲು ನಮಗೆ ಉತ್ತೇಜನ ನೀಡಿ ಡಾ. ಜರಿ ಪಯಾಸ್ ಅವರನ್ನು ಶ್ಲಾಘಿಸಿದರು. ಗಿರಿಜನರ ಅಭಿವೃದ್ಧಿಗಾಗಿ ತೊಡಗಿಸಿಕೊಂಡಿದ್ದು, ತಾಲೂಕಿನಲ್ಲಿ ಮಣ್ಣು ಪರೀಕ್ಷೆ, ನೀರು ಸಂರಕ್ಷಣೆ, ರಸ್ತೆ ಬದಿಯಲ್ಲಿ ಗಿಡ ನೆಡುವುದು, ಗಿರಿಜನರ ಹಾಡಿಗಳಲ್ಲಿ ಆಹಾರ ಭದ್ರತೆ, ಹಾಡಿಯಲ್ಲಿ ಆಪೌಷ್ಟಿಕತೆಯಿಂದ ಬಳಲುತ್ತಿರುವ ಮಹಿಳೆ ಮತ್ತು ಮಕ್ಕಳನ್ನು ಗುರುತಿಸಿ ಸೌಲಭ್ಯ ಕಲ್ಪಿಸುವುದು. ಬಾಲ ಕಾರ್ಮಿಕರನ್ನು ಗುರುತಿಸಿ ಸಂಸ್ಥೆಯಿಂದ ಉಚಿತ ಶಿಕ್ಷಣ ನೀಡಲಾಗುತ್ತಿದೆ. 20 ಹಾಡಿಗಳಲ್ಲಿ ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ಇದೇ ವೇಳೆಯಲ್ಲಿ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅವರು ತಾಲೂಕಿನ ಗಿರಿಜನರ ಬಗ್ಗೆ ಬರೆದಿರುವ ಕಾಡಿನಜಾತ್ರೆ, ಕಾಡುಜೀವನ, ಅನುಭವ ಮಂಟಪ ಪುಸ್ತಕಗಳನ್ನು ತಹಸೀಲ್ದಾರ್ ಎನ್. ನಂಜುಂಡಯ್ಯ ಬಿಡುಗಡೆ ಮಾಡಿದರು.

ಎಚ್.ಡಿ. ಕೋಟೆ ನಿಸರ್ಗ ಫೌಂಡೇಶನ್ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷೆ ಡಾ. ಮಂಜುಳಾ, ಡೀಡ್ ಸಂಸ್ಥೆ ಶ್ರೀಕಾಂತ್, ರೋಟರಿ ಅಧ್ಯಕ್ಷ ನಾರಾಯಣಲಾಲ್, ಗಿರಿಜನ ಮುಖಂಡ ಸೋಮಣ್ಣ, ವಿಠಲ್ ನಾಣಿ, ಜಗದೀಶ್‌ಪ್ಪೆ, ಎಂ.ವಿ.ಎನ್. ರಘು, ಸೋಮಶೇಖರ್, ಕ್ಷೀರಸಾಗರ, ಆರ್.ಕೆ. ಗೌಡ, ಜೀವಿಕ ಉಮೇಶ್, ಗುರುದೇವ ಆರಾಧ್ಯ, ರಾಜೇಗೌಡ, ವೀರಭದ್ರಸ್ವಾಮಿ, ರಾಘವೇಂದ್ರ, ಗಿರಿಜಾ, ಮಹದೇವಪ್ಪ, ಭಾಗ್ಯ, ರತ್ನಾ, ಪ್ರಭು ಇದ್ದರು.

ಎಚ್.ಡಿ. ಕೋಟೆಯ ನಿಸರ್ಗ ಫೌಂಡೇಷನ್ ಸಂಸ್ಥೆಯ 20ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಂಸ್ಥೆಯ ಹಿರಿಯ ಕಾರ್ಯಕರ್ತರನ್ನು ಸನ್ಮಾನಿಸಲಾಯಿತು.

ಕನ್ನಡಪ್ರಭ
ಭಾನುವಾರ 18.6.2017

ಸರ್ಕಾರದ ಅಭಿವೃದ್ಧಿ ಯೋಜನೆ ಮೂಲಕ ಬಾಲ ಕಾರ್ಮಿಕ ಪದ್ಧತಿ ಹೋಗಲಾಡಿಸಿ

ಕಾರ್ಯಕ್ರಮದಲ್ಲಿ ನಿಸರ್ಗ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ನಂಜುಂಡಯ್ಯ ಅಭಿಮತ

ಎಚ್.ಡಿ. ಕೋಟೆ ತಾಲೂಕಿನ ಮಜ್ಜನಕುಪ್ಪೆ ಹಾಡಿ ಆದಿವಾಸಿ ಅಜ್ಜಯ್ಯನ ಸಾಂಸ್ಕೃತಿಕ ಕಲಾ ಕೇಂದ್ರದಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ ಆದಿವಾಸಿಗಳು ಮತ್ತು ಬಾಲಕಾರ್ಮಿಕ ಮಕ್ಕಳಿಗೆ ಒಂದು ದಿನದ ಕಾರ್ಯಕ್ರಮ ನಡೆಯಿತು.

• ಕನ್ನಡಪ್ರಭ ವಾರ್ತೆ
ಎಚ್.ಡಿ. ಕೋಟೆ

ಆದಿವಾಸಿ ಅಜ್ಜಯ್ಯನ ಸಾಂಸ್ಕೃತಿಕ ಕಲಾ ಕೇಂದ್ರ, ನಿಸರ್ಗ ಫೌಂಡೇಷನ್ ಸಂಸ್ಥೆ, ತಾಲೂಕು ಗ್ರಾಮ ಸಭೆ ವೇದಿಕೆ ಹಾಗೂ ನಿಸರ್ಗ ಬಾಲ ಕಾರ್ಮಿಕ ಪುನರ್ವಸತಿ ಶಾಲಾ ಮಕ್ಕಳು ಮತ್ತು ಮಕ್ಕಳ ಸಹಾಯವಾಣಿ 1098 ಸಹಕಾರದೊಂದಿಗೆ ತಾಲೂಕಿನ ಮಜ್ಜನಕುಪ್ಪೆ ಹಾಡಿ ಆದಿವಾಸಿ ಅಜ್ಜಯ್ಯನ ಸಾಂಸ್ಕೃತಿಕ ಕಲಾ ಕೇಂದ್ರದಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ ಆದಿವಾಸಿಗಳು ಮತ್ತು ಬಾಲಕಾರ್ಮಿಕ ಮಕ್ಕಳಿಗೆ ಒಂದು ದಿನದ ಕಾರ್ಯಕ್ರಮ ನಡೆಯಿತು.

ನಿಸರ್ಗ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ನಂಜುಂಡಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಆದಿವಾಸಿಗಳ ಕಾಡಿನ ಜೀವನ ಹಾಗೂ ಅವರ ಸ್ಥಳಾಂತರ ಇಂದಿನ ಜೀವನದ ಸ್ಥಿತಿಗತಿ ಪರಿಚಯಿಸುತ್ತಾ, ಆದಿವಾಸಿಗಳಲ್ಲಿ ಬಾಲಕಾರ್ಮಿಕತೆ ಕೂಲಿ, ಜೀತ, ವಲಸೆ ಪ್ರಾರಂಭವಾಗಿದ್ದು, ಕಾಡಿನಿಂದ ಹೊರ ಬಂದ ಮೇಲೆ. ಇದನ್ನು ಹೋಗಲಾಡಿಸಲು ಸರ್ಕಾರದ ಅಭಿವೃದ್ಧಿ ಯೋಜನೆಗಳು ನೇರವಾಗಿ ಜನರಿಗೆ ತಲುಪಬೇಕು.

ಜನ ಸಮುದಾಯಗಳು ಅರಿವು ಮತ್ತು ಜಾಗೃತಿ ಮೂಡಿಸಿಕೊಂಡು ಬಾಲಕಾರ್ಮಿಕತೆ ಹೋಗಲಾಡಿಸಲು ಪಣ ತೊಡಬೇಕು. ನಿಸರ್ಗ ಬಾಲಕಾರ್ಮಿಕ ಪುನರ್ವಸತಿಶಾಲೆ ಕಳೆದ 6 ವರ್ಷಗಳಿಂದ 300ಕ್ಕೂ ಹೆಚ್ಚು ಶಾಲೆ ಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಯಶಸ್ವಿಯಾಗಿದೆ ಎಂದು ತಿಳಿಸಿದರು.

ದಿಲ್‌ಶಾದ್ ಮಾತನಾಡಿ, ವಿಶ್ವಪರಿಸರ ದಿನದ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಕೊಟ್ಟರು. ಆದಿವಾಸಿಗಳು ಪ್ರಕೃತಿ ಆರಾಧಕರು, ಪರಿಸರ ದೊಟ್ಟಿಗೆ ನಿಕಟ ಸಂಪರ್ಕ ಹೊಂದಿ ತಮ್ಮ ಬದುಕನ್ನು ಸಾಗಿಸಿದವರು. ಇವರ ಉಳಿಗಾಗಿ ಪರಿಸರ ಸಂರಕ್ಷಣೆ ಅನಿವಾರ್ಯ ಎಂದು ತಿಳಿಸುತ್ತಾ ಕಲಾಭವನದ ಆವರಣದಲ್ಲಿ ಬಾಲಕಾರ್ಮಿಕ ಮಕ್ಕಳಿಂದ ಸಸಿಗಳನ್ನು ನೆಡುವ ಮುಖಾಂತರ ಆಚರಿಸಲಾಯಿತು.

ನಿಸರ್ಗ ಸಂಸ್ಥೆಯ ಸಿಬ್ಬಂದಿ ಚಿಕ್ಕತಿಮ್ಮನಾಯ್ಕ, ಗುರುದೇವ ಆರಾಧ್ಯ, ಮಾರ್ಸಲೀನ್, ಪದ್ಮಾವತಿ, ಶೋಭ, ರಮ್ಯ, ಅನಿತಾ ಹಾಗೂ ಶಾಲಾ ಮಕ್ಕಳು, ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಮಜ್ಜನಕುಪ್ಪೆಯ ಬಸವೇಶ್ವರ ದೇವಸ್ಥಾನಕ್ಕೆ ಸಾಮೂಹಿಕ ಪೂಜೆ ಸಲ್ಲಿಸಿ ಮಳೆ-ಬೆಳೆ ಚೆನ್ನಾಗಿ ಬರಲೆಂದು ಹಾಗೂ ಆದಿವಾಸಿ ಬದುಕು ಚೆನ್ನಾಗಿ ಸಾಗಲೆಂದು ಪ್ರಾರ್ಥಿಸಿದರು.

ಉದಯವಾಣಿ ಜೂ. ೧೮, ೨೦೧೭

'ಕಾಡು ಕುಡಿಗಳು ಚಿಗುರಲಿ, ಅಡವಿ ಮಕ್ಕಳು ಅರಳಲಿ'

ಎಚ್.ಡಿ.ಕೋಟೆ ತಾ.ಮಜ್ಜನಕುಪ್ಪೆಯಲ್ಲಿ ಸಸಿ ನೆಟ್ಟು ಪರಿಸರ ಪ್ರೇಮ ಮೆರೆದ ಆದಿವಾಸಿಗಳು, ಮಕ್ಕಳು

ಎಚ್.ಡಿ.ಕೋಟೆ,ಜೂ.೧೭- ನಿಸರ್ಗ ಫೌಂಡೇಷನ್ ಸಂಸ್ಥೆ, ತಾಲ್ಲೂಕು ಗ್ರಾಮ ಸಭೆ ವೇದಿಕೆ ಹಾಗೂ ನಿಸರ್ಗ ಬಾಲಕಾರ್ಮಿಕರ ಪುನರ್ವಸತಿ ಶಾಲಾ ಮಕ್ಕಳು ಮತ್ತು ಮಕ್ಕಳ ಸಹಾಯವಾಣಿ ೧೦೯೮ ಸಹಕಾರದೊಂದಿಗೆ ಭೀಮನಹಳ್ಳಿ ಪಂಚಾಯಿತಿಗೆ ಸೇರಿದ ಮಜ್ಜನ ಕುಪ್ಪೆ ಹಾಡಿ ಆದಿವಾಸಿ ಅಜ್ಜಯ್ಯನ ಸಾಂಸ್ಕೃತಿಕ ಕಲಾ ಕೇಂದ್ರದಲ್ಲಿ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನದ ಅಂಗವಾಗಿ ಆದಿವಾಸಿಗಳು ಮತ್ತು ಮಕ್ಕಳಿಗೆ ವಿಶೇಷ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ನಿಸರ್ಗ ಸಂಸ್ಥೆಯ ಸಂಸ್ಥಾಪಕ ನಂಜುಂಡಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಆದಿವಾಸಿಗಳ ಕಾಡಿನ ಜೀವನ ಹಾಗೂ ಅವರ ಸ್ಥಳಾಂತರ ಇಂದಿನ ಜೀವನದ ಸ್ಥಿತಿಗತಿ ಪರಿಚಯಿಸಿದರಲ್ಲದೆ, ಆದಿವಾಸಿಗಳಿಗೆ ಸರ್ಕಾರದ ಅಭಿವೃದ್ಧಿ ಯೋಜನೆಗಳು ತಲುಪಬೇಕು. ಸಮುದಾಯಗಳು ಅರಿವು ಮತ್ತು ಜಾಗೃತಿ ಮೂಡಿಸಿಕೊಂಡು ಬಾಲ ಕಾರ್ಮಿಕತೆ ಹೋಗಲಾಡಿಸಲು ಪಣ ತೊಡಬೇಕು ಎಂದು ಕರೆ ನೀಡಿದರು.

ನಿಸರ್ಗ ಬಾಲಕಾರ್ಮಿಕ ಪುನರ್ವಸತಿ ಶಾಲೆ ೬ ವರ್ಷಗಳಿಂದ ೩೦೦ಕ್ಕೂ ಹೆಚ್ಚು ಶಾಲೆ ಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಯಶಸ್ವಿಯಾಗಿದೆ ಎಂದು ಅವರು ತಿಳಿಸಿದರು.

ದಿಲ್‌ಶಾದ್ ಮಾತನಾಡಿದರು. ಕಲಾಭವನದ ಆವರಣದಲ್ಲಿ ಮಕ್ಕಳು ಸಸಿಗಳನ್ನು ನೆಟ್ಟು ಪರಿಸರ ಪ್ರೇಮ ಮೆರೆದರು.

ನಿಸರ್ಗ ಸಂಸ್ಥೆಯ ಸಿಬ್ಬಂದಿ ಚಿಕ್ಕತಿಮ್ಮ ನಾಯ್ಕ, ಗುರುದೇವ ಆರಾಧ್ಯ, ಮಾರ್ಸಲೀನ್, ಪದ್ಮಾವತಿ, ಶೋಭ, ರಮ್ಯ, ಅನಿತಾ ಮತ್ತಿತರರು ಭಾಗವಹಿಸಿದ್ದರು. ಇದೇ ಸಮಯದಲ್ಲಿ ಮಜ್ಜನಕುಪ್ಪೆಯ ಕಾಡುಬಸವೇಶ್ವರ ದೇಗುಲದಲ್ಲಿ ಸಾಮೂಹಿಕ ಪೂಜೆ ಸಲ್ಲಿಸಲಾಯಿತು.

ಕಾಡು ಕುಡಿಗಳು ಚಿಗುರಲಿ, ಅಡವಿ ಮಕ್ಕಳು ಅರಳಲಿ ಎಂಬ ಘೋಷಣೆಗಳನ್ನು ಮಕ್ಕಳು ಕೂಗಿ ಜನ ಜಾಗೃತಿಗೊಳಿಸಿದರು.

ಆದಿವಾಸಿಗಳು ಪ್ರಕೃತಿ ಆರಾಧಕರು, ಪರಿಸರದೊಂದಿಗೆ ನಿಕಟ ಸಂಪರ್ಕ ಹೊಂದಿ ತಮ್ಮ ಬದುಕನ್ನು ಸಾಗಿಸಿದವರು. ಇವರ ಉಳಿವಿಗಾಗಿ ಪರಿಸರ ಸಂರಕ್ಷಣೆ ಅನಿವಾರ್ಯ.
-ದಿಲ್‌ಶಾದ್

ವಿಶ್ವ ಬಾಲಕಾರ್ಮಿಕರ ವಿರೋಧಿ ದಿನ ಹಾಗೂ ವಿಶ್ವ ಪರಿಸರ ದಿನವನ್ನು ಎಚ್.ಡಿ. ಕೋಟೆ ತಾಲ್ಲೂಕಿನ ಮಜ್ಜನಕುಪ್ಪೆ ಹಾಡಿಯಲ್ಲಿ ಆದಿವಾಸಿ ಅಜ್ಜಯ್ಯನ ಸಾಂಸ್ಕೃತಿಕ ಕಲಾ ಕೇಂದ್ರದ ವತಿಯಿಂದ ಆಚರಿಸಲಾಯಿತು.

ದಿನಾಂಕ 12-10-2017

ಕನ್ನಡ ಪ್ರಭ ದಿನಪತ್ರಿಕೆ.

ಸಮಾಜ ಸೇವಕ ನಂಜುಂಡಯ್ಯಗೆ ಅಭಿನಂದನೆ

• ಕನ್ನಡಪ್ರಭ ವಾರ್ತೆ ಎಚ್.ಡಿ. ಕೋಟೆ

ನಿಸರ್ಗ ಫೌಂಡೇಷನ್ ವತಿಯಿಂದ ಮಾತೃ ಭೂಮಿ ಸೇವಾ ಪ್ರಶಸ್ತಿ ಪುರಸ್ಕೃತ ನಂಜುಂಡಯ್ಯ ಅಭಿನಂದಿಸಲಾಯಿತು.

ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಮತ್ತು ಬಾಲಕಾರ್ಮಿಕ ಶಾಲಾ ಮಕ್ಕಳು ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ ಸಲ್ಲಿಸಿದರು. ನಂಜುಂಡಯ್ಯ ಅವರು ಮೈಸೂರು ಜಿಲ್ಲೆ ಹುಣಸೂರು ತಾಲೂಕು ದೊಡ್ಡಹೆಜ್ಜೂರು ಗ್ರಾಮದ ಗೌರಮ್ಮ-ನಂಜಯ್ಯ ಅವರ ಸುಪುತ್ರರಾಗಿ 1960 ಜನಿಸಿದರು. ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವಾಲಯ ಅಡಿಯಲ್ಲಿ ಕಪಾರ್ಟ್ ಯೋಜನೆಯ ಸದಸ್ಯರಾಗಿ 5 ವರ್ಷಗಳ ಕಾಲ ಸೇವೆ ಸಲ್ಲಿಸಿ ಆದಿವಾಸಿ ದಲಿತ ಹಿಂದುಳಿದ ವರ್ಗಗಳ 30 ಹಾಡಿಗಳ ಜನರ ಸೇವೆ ಮತ್ತು ರಾತ್ರಿ ಶಾಲೆಗಳಲ್ಲಿ ಸಾವಿರಾರು ಆದಿವಾಸಿಗಳಿಗೆ ಅಕ್ಷರ ಜ್ಞಾನ ನೀಡಲು ಮುಂದಾದರು. ಎಚ್.ಡಿ. ಕೋಟೆಯ 110 ಹಾಡಿಗಳಲ್ಲಿ ಮನನೀಯ ಸೇವೆ ಸಾಕ್ಷರತೆ, ರಂಗಭೂಮಿ ಪರಿಸರ ಆದಿವಾಸಿ ಸಂಸ್ಕೃತಿ ರಕ್ಷಣೆ ಸಂಪರ್ಕ ಜನಪರ ಹೋರಾಟ ಹೀಗೆ ಬಹುಮುಖ ಕ್ಷೇತ್ರಗಳಲ್ಲಿ ಆದಿವಾಸಿಗಳ ದಲಿತರ ಹಾಗೂ ಸರ್ವತೋಮುಖ ಪ್ರಗತಿಗಾಗಿ ನಿರ್ಮಾತೃವೇ ಧ್ವನಿ ಇಲ್ಲದವರ ಪರ ನಿಂತಿರುವ ಹರಿಕಾರರು ಮಹಿಳಾ ಸಬಲೀಕರಣಕ್ಕೆ ಶ್ರಮಿಸಿದರು. ಇತ್ತೀಚೆಗೆ ಖಾಸಗಿ ವಾಹಿನಿ ನಡೆಸಿಕೊಡುವ ನಿಮಗೊಂದು ಸಲಾಂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕಾಗಿ ನಿಸರ್ಗ ಫೌಂಡೇಷನ್‌ನಿಂದ ಸನ್ಮಾನಿಸಲಾಯಿತು.

ಮೈಸೂರು
ಗ್ರಾಮಾಂತರ

ಸಣ್ ಸುದ್ದಿ

ಪ್ರತಿಭಾ ಕಾರಂಜಿಯಲ್ಲಿ ಆದಿವಾಸಿ ಮಕ್ಕಳ ಗೆಲುವು

ಎಚ್.ಡಿ. ಕೋಟೆ: ಶಿಕ್ಷಣ ಇಲಾಖೆಯಿಂದ ನಡೆದ ಎಚ್.ಡಿ. ಕೋಟೆ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮದಲ್ಲಿ ನಿಸರ್ಗ ಸಂಸ್ಥೆಯು ನಡೆಸುತ್ತಿರುವ ನಿಸರ್ಗ ರಾಷ್ಟ್ರೀಯ ಬಾಲ ಕಾರ್ಮಿಕ ಶಾಲಾ ಮಕ್ಕಳು ಭಾಗವಹಿಸಿ ಆದಿವಾಸಿಗಳ ಪಾರಂಪರಿಕ ಕಲೆಯಾದ ಕೋಲಾಟವನ್ನು ಪ್ರದರ್ಶಿಸಿ ಪ್ರಥಮ ಸ್ಥಾನ ಗಳಿಸಿ, ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಆಯ್ಕೆಯಾಗಿದ್ದಾರೆ. ಇದರ ಜೊತೆಗೆ ದೇಶ ಭಕ್ತಿ ಗೀತೆಯಲ್ಲಿ ತೃತೀಯ ಸ್ಥಾನವನ್ನು ಪಡೆದು ಉಳಿದ ಸ್ಪರ್ಧೆಗಳಲ್ಲಿ ಸಮಾಧಾನಕರ ಬಹುಮಾನ ಪಡೆದಿದ್ದಾರೆ.

ನಿಸರ್ಗ ರಾಷ್ಟ್ರೀಯ ಬಾಲಕಾರ್ಮಿಕ ಶಾಲಾ ಮಕ್ಕಳು ಭಾಗವಹಿಸಿ ಆದಿವಾಸಿಗಳ ಪಾರಂಪರಿಕ ಕಲೆಯಾದ ಕೋಲಾಟವನ್ನು ಪ್ರದರ್ಶಿಸಿ ಪ್ರಥಮ ಸ್ಥಾನ ಗಳಿಸಿ, ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಆಯ್ಕೆಯಾಗಿದ್ದಾರೆ.

XIV. AuditReport

NISARGA FOUNDATION, H D KOTE

Foreign contribution account

BALANCE SHEET AS AT 31ST MARCH, 2018.

LIABILITIES.	31.03.2018		31.03.2017
	Rs.	Rs.	Rs.
CAPITAL FUND ACCOUNT:			
Balance as on 01.04.2017	31,57,814.56		31,57,814.56
Less:Excess Of Expenditure Over Income	1,98,346.20	29,59,468.36	
Current Liability			
Local Account Balance		-	86,000.00
TOTAL		29,59,468.36	32,43,814.56
ASSETS.	**Rs.**	**Rs.**	**Rs.**
FIXED ASSETS:			
As per Schedule		25,00,761.00	23,90,075.00
CASH AND BANK BALANCES;			
Cash on hand	87.00		943.30
Cash in SB with Vijaya Bank - 8793	4,58,620.36	4,58,707.36	8,52,796.26
TOTAL		29,59,468.36	32,43,814.56

Date : 03.07.2018

Place : MYSORE

A R KRISHNAN

CHARTERED ACCOUNTANT

MM 243498

A. R. KRISHNAN
M.No. 243498
Chartered Accountant
Sree Mahalakshmi Mandiram
1105, Geetha Road
Chamarajapuram, MYSORE-5

NISARGA FOUNDATION, H D KOTE

CONSOLIDATED

BALANCE SHEET AS AT 31ST MARCH, 2018.

LIABILITIES.	31.03.2018		31.03.2017
	Rs.	Rs.	Rs.
CAPITAL FUND ACCOUNT:			
Balance as on 01.04.2017	(29,01,130.25)		(29,01,130.25)
Add:Excess of Income over expenditure	3,77,347.70	(25,23,782.55)	
F.C. ACCOUNT:			
Balance as on 01.04.2017	31,57,814.56		31,57,814.56
Add : Foreign contribution received	4,94,080.00		
. Interest on SB	18,815.00		
	36,70,709.56		
Less:Utilised	7,97,241.20	28,73,468.36	
OTHER LIABILITIES:			
Narayan Lal	4,84,945.00		4,84,945.00
Mr. Nanjundiah	12,65,529.00		15,48,317.00
Mr Chikkathimma Naika	1,77,000.00		1,77,000.00
Mr Prabhu	3,48,000.00		3,53,000.00
Mr Gurudev Aradhya	2,99,000.00		2,96,000.00
Others	2,38,206.00	28,12,680.00	2,38,206.00
TOTAL		**31,62,365.81**	**33,54,152.31**
ASSETS.	**Rs.**	**Rs.**	**Rs.**
FIXED ASSETS:			
As per Schedule		25,72,817.00	24,74,417.00
DEPOSITS			
Rent	20,000.00		20,000.00
Telephone	2,000.00	22,000.00	2,000.00
CASH AND BANK BALANCES:			
Cash In :			
In S.B with Vijaya Bank - 8784	94,332.20		1,362.00
In S.B with Vijaya Bank - 13273	6,429.00		914.00
In S.B with Vijaya Bank - 1802	7,630.00		1,187.00
In SB with Vijaya Bank - 8793 (FC Account)	4,58,620.36		8,52,796.26
On hand-Local account	54.25		82.25
On hand-Government account	-		396.00
On hand-Childline Project	-		-
On hand-Mid day meals	396.00		54.50
On hand-F.C.	87.00	5,67,548.81	943.30
TOTAL		**31,62,365.81**	**33,54,152.31**

Date : 03.07.2018
Place : MYSORE

Vide my report of even date

Akrishnan

A R KRISHNAN
CHARTERED ACCOUNTANT
MM 243498

A. R. KRISHNAN
M.No. 243498
Chartered Accountant
Sree Mahalakshmi Mandiram
1105, Geetha Road
Chamarajapuram, MYSORE-5